**2** ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರು
ಚಿಕ್ಕಮಗಳೂರು

**ಸತ್ರ ಮೊಕದ್ದಮೆ ಸಂಖ್ಯೆ: 30/2021**

| | |
|---|---|
| 1 ನೇ ಆರೋಪಿಯ ಹೆಸರು | : ನಿಶಾಂತ |
| ತಂದೆಯ ಹೆಸರು | : ಶಂಕರಗೌಡ |
| ವಯಸ್ಸು | : 20 ವರ್ಷ |
| ವಾಸಸ್ಥಳ | : ಗಡಬನಹಳ್ಳಿ ವಸ್ತಾರೆ, ಚಿಕ್ಕಮಗಳೂರು |

| | |
|---|---|
| 2 ನೇ ಆರೋಪಿಯ ಹೆಸರು | : ಜೀವನ ಸಿ ಆರ್ |
| ತಂದೆಯ ಹೆಸರು | : ರಾಮಚಂದ್ರ |
| ವಯಸ್ಸು | : 19 ವರ್ಷ |
| ವಾಸಸ್ಥಳ | : ಶನೇಶ್ವರ ದೇವಸ್ಥಾನ, ಗೌರಿ ಕಾಲುವೆ, ಚಿಕ್ಕಮಗಳೂರು |

| | |
|---|---|
| 3 ನೇ ಆರೋಪಿಯ ಹೆಸರು | : ನೂತನ್ |
| ತಂದೆಯ ಹೆಸರು | : ಮಹೇಶ |
| ವಯಸ್ಸು | : 19 ವರ್ಷ |
| ವಾಸಸ್ಥಳ | : ಲಕ್ಯಾ, ಚಿಕ್ಕಮಗಳೂರು |

| | |
|---|---|
| 4 ನೇ ಆರೋಪಿಯ ಹೆಸರು | : ಪ್ರೀತಮ ಗೌಡ |
| ತಂದೆಯ ಹೆಸರು | : ಚಂದ್ರೇಗೌಡ |
| ವಯಸ್ಸು | : 25 ವರ್ಷ |
| ವಾಸಸ್ಥಳ | : ಕೂದುವಳ್ಳಿ ಗ್ರಾಮ, ವಸ್ತಾರೆ, ಚಿಕ್ಕಮಗಳೂರು |

| | |
|---|---|
| 5 ನೇ ಆರೋಪಿಯ ಹೆಸರು | : ಗಣೇಶ ಆಚಾರ್ಯ |
| ತಂದೆಯ ಹೆಸರು | : ಸದಾಶಿವ ಆಚಾರ್ಯ |
| ವಯಸ್ಸು | : 34 ವರ್ಷ |
| ವಾಸಸ್ಥಳ | : ಎಲೆಹೊಳೆ ಗ್ರಾಮ, ಜೋಳದಾಳ ಪೋಸ್ಟ್ ಚಿಕ್ಕಮಗಳೂರು |

**ಕಲಂ 313 ಸಿ.ಆರ್ ಪಿ.ಸಿ ಅಡಿಯಲ್ಲಿ ಆರೋಪಿಯ ಹೇಳಿಕೆ**

ಪ್ರಶ್ನೆ 1 ಅಭಿಯೋಜನೆಯ ಸಾಕ್ಷಿಗಳ ಸಾಕ್ಷ್ಯ ವಿಚಾರವನ್ನು ಕೇಳಿದ್ದೀರಾ?
ಉತ್ತರ: ಆ 1. ಹೌದು
ಆ 2. ಹೌದು
ಆ 3. ಹೌದು

ಆ 4. ಹೌದು
ಆ 5. ಹೌದು

ಪ್ರಶ್ನೆ-2 ಪ್ರಾಸಾ.1 ವಿಶ್ವಾಸ್ ಇವರು ತಮ್ಮ ಸಾಕ್ಷ್ಯದಲ್ಲಿ ಆರೋಪಿತರಾದ ನಿಮ್ಮಗಳನ್ನು ನೋಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1. ಸುಳ್ಳು
ಆ 2. ಸುಳ್ಳು
ಆ 3. ಸುಳ್ಳು
ಆ 4. ಸುಳ್ಳು
ಆ 5. ಸುಳ್ಳು

ಪ್ರಶ್ನೆ-3 ಪ್ರಾಸಾ.1 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಚಾಸಾ.2 ರಿಂದ ಚಾಸಾ.4 ರವರು ತನ್ನ ಸ್ನೇಹಿತರು, ಚಾಸಾ.5 ತನ್ನ ಸೋದರ ಸಂಬಂಧಿ, ಚಾಸಾ.6 ಮತ್ತು ಚಾಸಾ.7 ತನ್ನ ಸ್ನೇಹಿತರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1. ಸುಳ್ಳು
ಆ 2. ಸುಳ್ಳು
ಆ 3. ಸುಳ್ಳು
ಆ 4. ಸುಳ್ಳು
ಆ 5. ಸುಳ್ಳು

ಪ್ರಶ್ನೆ-4 ಪ್ರಾಸಾ.1 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ದಿಃ 09.07.2019 ರಂದು ಮಧ್ಯಾಹ್ನ 2.30 ರಿಂದ 3.00 ಗಂಟೆ ಸಮಯದಲ್ಲಿ ತಾನು ಮನೆಯಲ್ಲಿ ಊಟ ಮಾಡಿ ಕುಳಿತಿದ್ದಾಗ, ತನ್ನ ತಮ್ಮನಾದ ಚಾಸಾ.5 ಸುದೀಪ್ ತಮ್ಮ ಮನೆಗೆ ಬಂದು ಆ ದಿನ ಮಧ್ಯಾಹ್ನ 2.45 ಗಂಟೆಗೆ ವಿಜಯಪುರ ಮುಖ್ಯ ರಸ್ತೆಯಲ್ಲಿರುವ ಹಳೆ ಶೋ ಆಫ್ ಬಟ್ಟೆ ಅಂಗಡಿಯ ಮುಂಭಾಗ ಹೋಗುತ್ತಿದ್ದ ಸಮಯದಲ್ಲಿ 1 ಮತ್ತು 2 ನೇ ಆರೋಪಿಗಳಾದ ನೀವುಗಳು ಅಡ್ಡ ಬಂದು ಆತನಿಗೆ ಕೈಗಳಿಂದ ಹೊಡೆದು ಯಾರನ್ನು ಕರೆದುಕೊಂಡು ಬರುತ್ತೀಯೋ ಕರೆದುಕೊಂಡು ಬಾ ಎಂದು ಹೇಳಿ ಕಳುಹಿಸಿದ್ದಾಗಿ ಹಾಗೂ ತನ್ನ ತಮ್ಮನಿಗೆ ಬೋಳಿಮಗನೇ, ಸೂಳೆ ಮಗನೇ ಎಂದು ಬೈದಿದ್ದನ್ನು ತನ್ನ ತಮ್ಮ ತನಗೆ ತಿಳಿಸಿರುವುದಾಗಿ, ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1. ಸುಳ್ಳು
ಆ 2. ಸುಳ್ಳು
ಆ 3. ಸುಳ್ಳು
ಆ 4. ಸುಳ್ಳು
ಆ 5. ಸುಳ್ಳು

ಪ್ರಶ್ನೆ-5 ಪ್ರಾಸಾ.1 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ನಂತರ ತನ್ನ ತಮ್ಮ ಬಾ ಎಂದು ಹೇಳಿ ತನ್ನನ್ನು ವಿಜಯಪುರ ಮುಖ್ಯ

ರಸ್ತೆಯಲ್ಲಿರುವ ಹಳೆ ಶೋ ಆಫ್ ಬಟ್ಟೆ ಅಂಗಡಿಯ ಬಳಿ ಕರೆದುಕೊಂಡು ಹೋದಾಗ ಅಲ್ಲಿ 1 ಮತ್ತು 2 ನೇ ಆರೋಪಿಗಳಾದ ನೀವುಗಳು ಮತ್ತು ಉಳಿದ ಅರೋಪಿಗಳಾದ ನೀವುಗಳು ಅಲ್ಲಿದ್ದುದ್ದಾಗಿ, ತಾನು ಅವರನ್ನು ಕುರಿತು ಏಕೆ ತನ್ನ ತಮ್ಮನಿಗೆ ಹೊಡೆದಿರಿ ಎಂದು ಕೇಳಿದಾಗ 1 ನೇ ಆರೋಪಿಯಾದ ನೀನು ತನಗೂ ಹೊಡೆಯುತ್ತೇನೆ, ತನ್ನ ತಮ್ಮನಿಗೂ ಹೊಡೆಯುತ್ತೇನೆ ಎಂದು ಹೇಳಿ ಕೈಯಲ್ಲಿದ್ದ ಕಬ್ಬಿಣದ ರಾಡಿನಿಂದ ತನ್ನ ತಲೆಯ ಎಡಭಾಗಕ್ಕೆ ಮತ್ತು ಎಡಕೈಗೆ ಹೊಡೆದಿದ್ದಾಗಿ, ಅದರಿಂದ ತನಗೆ ಗಾಯವಾಗಿ ರಕ್ತ ಬಂದಿದ್ದು, ಆಗ ಉಳಿದ ಆರೋಪಿತರಾದ ನೀವುಗಳು ಕೈಗಳಿಂದ ತನ್ನ ಮೈಕೈಗೆ ಮತ್ತು ಕಾಲುಗಳಿಗೆ ಹೊಡೆದಿರುವುದಾಗಿ, ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃಆ 1. ಸುಳ್ಳು
ಆ 2. ಸುಳ್ಳು
ಆ 3. ಸುಳ್ಳು
ಆ 4. ಸುಳ್ಳು
ಆ 5. ಸುಳ್ಳು

ಪ್ರಶ್ನೆ-6 ಪ್ರಾಸಾ.1 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಆಗ ಅಲ್ಲಿಯೇ ಇದ್ದ ತನ್ನ ತಮ್ಮನಾದ ಚಾಸಾ.5 ಸುದೀಪ್ ಮತ್ತು ತನ್ನ ಸ್ನೇಹಿತರಾದ ಪವನ್, ಅಭಿಷೇಕ, ಚೇತನ ಮತ್ತು ಶಬರೀಶ್‌ರವರು ಅಲ್ಲಿಗೆ ಬಂದು ಜಗಳವನ್ನು ಬಿಡಿಸಿದ್ದು, ನಂತರ ತನ್ನನ್ನು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಗೆ ತನ್ನ ತಲೆಯ ಎಡಭಾಗದಲ್ಲಿ ಗಾಯವಾಗಿ ರಕ್ತ ಬರುತ್ತಿರುವುದರಿಂದ ಚಿಕಿತ್ಸೆಗಾಗಿ ದಾಖಲಿಸಿದ್ದಾಗಿ, ಮಾರನೇ ದಿನ 10 ನೇ ತಾರೀಖಿನಂದು ಮಧ್ಯಾಹ್ನ 1.15 ಗಂಟೆಯಿಂದ 1.45 ಗಂಟೆ ಸಮಯಕ್ಕೆ ಬಸವನಹಳ್ಳಿ ಪೊಲೀಸರು ಸದರಿ ಆಸ್ಪತ್ರೆಗೆ ಬಂದು ತನ್ನನ್ನು ವಿಚಾರಿಸಿ ಎಲ್ಲಿ ಗಲಾಟೆಯಾಯಿತು ಎಂದು ಕೇಳಿ, ತಾನು ಗಲಾಟೆಯ ಸಮಯದಲ್ಲಿ ಧರಿಸಿದ್ ರಕ್ತದ ಕಲೆಗಳಾಗಿದ್ದ ಹಸಿರು ಪಾಚಿ ಬಣ್ಣದ ಟೀ ಶರ್ಟನ್ನು ಲ್ಯಾಬಿಗೆ ಕಳುಹಿಸಬೇಕೆಂದು ಹೇಳಿ ತೆಗೆದುಕೊಂಡು ನಿಪಿ.1 ಮಹಜರಗೆ ತನ್ನ ಜೊತೆ ಪವನ್ ಶಬರೀಶ್ ರವರು ಸಹ ಸಹಿಯನ್ನು ತೆಗೆದುಕೊಂಡಿರುವುದಾಗಿ, ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1. ಸುಳ್ಳು
ಆ 2. ಸುಳ್ಳು
ಆ 3. ಸುಳ್ಳು
ಆ 4. ಸುಳ್ಳು
ಆ 5. ಸುಳ್ಳು

ಪ್ರಶ್ನೆ-7 ಪ್ರಾಸಾ.1 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ನಿಪಿ.2 ಪೋಟೋವನ್ನು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯಲ್ಲಿ ಮಹಜರ್ ಮಾಡುವ ಸಮಯಕ್ಕೆ ತೆಗೆದುಕೊಂಡಿದ್ದು, ಅದರಲ್ಲಿ ತನ್ನ ಜೊತೆ ಪವನ್, ಶಬರೀಶ್ ಮತ್ತು ತನ್ನ ತಮ್ಮ ಸುದೀಪ್ ಇರುವುದಾಗಿ, ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1. ಸುಳ್ಳು
ಆ 2. ಸುಳ್ಳು
ಆ 3. ಸುಳ್ಳು
ಆ 4. ಸುಳ್ಳು
ಆ 5. ಸುಳ್ಳು

ಪ್ರಶ್ನೆ-8 ಪ್ರಾಸಾ.1 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಬಿಳಿಯ ಬಟ್ಟೆಯಲ್ಲಿ ಹೊಲೆದು ಎಫ್ ಎಸ್ ಎಲ್ ಸೀಲು ಮಾಡಿದ್ದ ವಸ್ತುವನ್ನು ತನಗೆ ತೋರಿಸಲಾಗಿ ತಾನು ಅದರಲ್ಲಿದ್ದ ಮು.ಮಾ.1 ಒಂದು ಪಾಚಿ ಹಸಿರು ಬಣ್ಣದ ಟೀ ಶರ್ಟನ್ನು ತಾನು ಘಟನೆ ನಡೆದ ಸಮಯದಲ್ಲಿ ಧರಿಸಿದ್ದ ಟೀ ಶರ್ಟು ಅದೇ ಎಂದು ಗುರುತಿಸಿದ್ದು, ಅದರಲ್ಲಿ ರಕ್ತದ ಕಲೆಗಳು ಇರುವುದು ಕಂಡು ಬಂದಿದ್ದಾಗಿ, 9 ನೇ ತಾರೀಖಿನಂದು ತಾನು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯಲ್ಲಿ ಮಧ್ಯಾಹ್ನ 3.00 ರಿಂದ 4.00 ಗಂಟೆ ಸಮಯಕ್ಕೆ ಬಸವನಹಳ್ಳಿ ಪೊಲೀಸರು ಬಂದು ತನ್ನನ್ನು ವಿಚಾರಿಸಿದಾಗ ತಾನು ಅವರಿಗೆ ಆರೋಪಿತರಾದ ನೀವುಗಳು ತನ್ನ ತಮ್ಮನಿಗೆ ಹೊಡೆದಿದ್ದು ಮತ್ತು ಅದನ್ನು ಕೇಳಲು ಹೋದಾಗ ಆರೋಪಿತರಾದ ನೀವುಗಳು ತನಗೂ ಸಹ ಹೊಡೆದಿದ್ದಾಗಿ ತಿಳಿಸಿರುವುದಾಗಿ, ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1. ಸುಳ್ಳು
ಆ 2. ಸುಳ್ಳು
ಆ 3. ಸುಳ್ಳು
ಆ 4. ಸುಳ್ಳು
ಆ 5. ಸುಳ್ಳು

ಪ್ರಶ್ನೆ-9 ಪ್ರಾಸಾ.1 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಗಲಾಟೆಯ ಬಗ್ಗೆ ತಾನು ಪೊಲೀಸರಿಗೆ ದಿಃ 09.07.2019 ರಂದು ನಿಪಿ.3 ಹೇಳಿಕೆಯ ದೂರನ್ನು ನೀಡಿದ್ದಾಗಿ ಹಾಗೂ ಅದಕ್ಕೆ ತಾನು ಸಹಿಯನ್ನು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯಲ್ಲಿ ಮಾಡಿರುವುದಾಗಿ, ಮು.ಮಾ.2 ಒಂದು ಕಬ್ಬಿಣದ ರಾಡಿನಲ್ಲಿ 1 ನೇ ಆರೋಪಿಯಾದ ನೀನು ತನಗೆ ಹೊಡೆಯಲು ಬಳಸಿದ್ದು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1. ಸುಳ್ಳು
ಆ 2. ಸುಳ್ಳು
ಆ 3. ಸುಳ್ಳು
ಆ 4. ಸುಳ್ಳು
ಆ 5. ಸುಳ್ಳು

ಪ್ರಶ್ನೆ-10 ಪ್ರಾಸಾ.2 ಸುದೀಪ್ ಇವರು ತಮ್ಮ ಸಾಕ್ಷ್ಯದಲ್ಲಿ ಆರೋಪಿತರಾದ ನೀವುಗಳು ಗೊತ್ತಿದ್ದಾಗಿ, ನೀವೆಲ್ಲರೂ ಚಿಕ್ಕಮಗಳೂರಿನ ವಿಜಯಪುರ ಏರಿಯಾದವರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1. ಸುಳ್ಳು
ಆ 2. ಸುಳ್ಳು
ಆ 3. ಸುಳ್ಳು
ಆ 4. ಸುಳ್ಳು
ಆ 5. ಸುಳ್ಳು

ಪ್ರಶ್ನೆ-11 ಪ್ರಾಸಾ.2 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಪ್ರಾಸಾ.1 ತನ್ನ ದೊಡ್ಡಮ್ಮನ ಮಗ. ಚಾಸಾ.2 ರಿಂದ ಚಾಸಾ.4, ಚಾಸಾ.6, ಚಾಸಾ.7 ರವರು ತನ್ನ ಸ್ನೇಹಿತರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1. ಸುಳ್ಳು
ಆ 2. ಸುಳ್ಳು
ಆ 3. ಸುಳ್ಳು
ಆ 4. ಸುಳ್ಳು
ಆ 5. ಸುಳ್ಳು

ಪ್ರಶ್ನೆ-12 ಪ್ರಾಸಾ.2 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ದಿನಾಂಕ 09.07.2019 ರಂದು ಮಧ್ಯಾಹ್ನ 2.30 ರಿಂದ 2.45 ಗಂಟೆ ಸಮಯದಲ್ಲಿ ತಾನು ವಿಜಯಪುರ ಮುಖ್ಯ ರಸ್ತೆಯಲ್ಲಿರುವ ಹಳೆ ಶೋ ಆಫ್ ಅಂಗಡಿಯ ಮುಂದೆ ನಡೆದುಕೊಂಡು ಹೋಗುತ್ತಿದ್ದಾಗ ಯಾವುದೋ ಹಳೆಯ ವಿಚಾರಕ್ಕೆ ತನ್ನ ಮತ್ತು ಗಣೇಶ, ನೂತನ್, ಜೀವನ್, ಪವನ್ ರವರ ನಡುವೆ ಜಗಳವಾಗಿದ್ದು, ಅದೇ ವಿಚಾರಕ್ಕೆ ಶೋ ಆಫ್ ಅಂಗಡಿಯ ಮುಂದೆ ನಿಂತಿದ್ದ ಆರೋಪಿತರಾದ ನೀವುಗಳು ಬಂದು ತನ್ನನ್ನು ಅಡ್ಡಗಟ್ಟಿ ಕೈಗಳಿಂದ ಹೊಡೆದಿದ್ದ, ನಂತರ ತಾನು ತನ್ನ ಅಣ್ಣನಾದ ಪ್ರಾಸಾ.1 ವಿಶ್ವಾಸ್ ರವರ ಮನೆಗೆ ಹೋಗಿ ಅಲ್ಲಿ ತನ್ನ ಅಣ್ಣನಿಗೆ ಮೇಲೆ ಹೇಳಿದಂತೆ ಆರೋಪಿತರಾದ ನೀವುಗಳು ತನಗೆ ಹೊಡೆದ ವಿಚಾರವನ್ನು ತಿಳಿಸಿರುವುದಾಗಿ, ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1. ಸುಳ್ಳು
ಆ 2. ಸುಳ್ಳು
ಆ 3. ಸುಳ್ಳು
ಆ 4. ಸುಳ್ಳು
ಆ 5. ಸುಳ್ಳು

ಪ್ರಶ್ನೆ-13 ಪ್ರಾಸಾ.2 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ನಂತರ ತಾನು ಪ್ರಾಸಾ.1 ರವರನ್ನು ಕರೆದುಕೊಂಡು ಆರೋಪಿತರಾದ ನೀವು ತನಗೆ ಹೊಡೆದ ಸ್ಥಳಕ್ಕೆ ಹೋದಾಗ ಆರೋಪಿತರಾದ ನೀವುಗಳು ಹಳೆ ಶೋ ಆಫ್ ಅಂಗಡಿಯ ಮುಂದೆ ಇದ್ದು ಆಗ ಪ್ರಾಸಾ.1 ರವರು ನಿಮಗೆ ತನ್ನನ್ನು ಯಾಕೆ ಹೊಡೆದದ್ದು ಎಂದು ಕೇಳಿದ್ದಾಗ 1 ನೇ ಆರೋಪಿಯಾದ ನೀನು ತನ್ನ ಅಣ್ಣನಿಗೆ ಸೂಳೇ ಮಗನೇ ಎಂದು ಬೈದು ತಮ್ಮನ್ನು ಬಿಡುವುದಿಲ್ಲ, ಸಾಯಿಸುತ್ತೇನೆ ಎಂದು ಹೇಳಿ ಕಬ್ಬಿಣದ ರಾಡಿನಿಂದ ಪ್ರಾಸಾ.1 ರವರ ತಲೆಯ ಎಡಭಾಗಕ್ಕೆ ಹೊಡೆದು ನಂತರ

ಪುನಃ 1 ನೇ ಆರೋಪಿಯಾದ ನೀನು ಪ್ರಾಸಾ.1 ರವರಿಗೆ ಹೊಡೆಯಲು ಹೋದಾಗ ತಪ್ಪಿಸಿಕೊಳ್ಳಲು ಪ್ರಾಸಾ.1 ರವರು ತನ್ನ ಎಡಗೈಯನ್ನು ಅಡ್ಡ ಹಿಡಿದಾಗ ಆತನ ಎಡಗೈಗೆ ಪೆಟ್ಟಾಗಿದ್ದು, ಅಷ್ಟರಲ್ಲಿ ತನ್ನ ಸ್ನೇಹಿತರಾದ ಚೇತನ್, ಧೀಮಂತ್ ಮತ್ತು ಅಭಿಷೇಕ್ ರವರು ಅಲ್ಲಿಗೆ ಬಂದು ತಾವೆಲ್ಲರೂ ಸೇರಿ ಜಗಳವನ್ನು ಬಿಡಿಸಿರುವುದಾಗಿ ಪ್ರಾಸಾ.1 ರವರ ತಲೆಯ ಎಡಭಾಗಕ್ಕೆ ಪೆಟ್ಟಾಗಿ ರಕ್ತ ಸೋರುತ್ತಿದ್ದು ಮತ್ತು ಅವರ ಎಡಗೈಗೆ ಪೆಟ್ಟಾಗಿದ್ದು, ಅವರನ್ನು ಚಿಕ್ಕಮಗಳೂರು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲು ಮಾಡಿರುವುದಾಗಿ, ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1. ಸುಳ್ಳು
ಆ 2. ಸುಳ್ಳು
ಆ 3. ಸುಳ್ಳು
ಆ 4. ಸುಳ್ಳು
ಆ 5. ಸುಳ್ಳು

ಪ್ರಶ್ನೆ-14 ಪ್ರಾಸಾ.2 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು 1 ನೇ ಆರೋಪಿಯಾದ ನೀನು ಪ್ರಾಸಾ.1 ರವರ ಮೇಲೆ ಹಲ್ಲೆ ಮಾಡಲು ಬಳಸಿದ್ದ ರಾಡನ್ನು ಹೋಗುವಾಗ ಅಲ್ಲಿಯೇ ಪಕ್ಕದಲ್ಲಿ ಬಿಸಾಡಿ ಹೋಗಿದ್ದು, ನಂತರ ಅದೇ ದಿನ ಮಧ್ಯಾಹ್ನ ಸುಮಾರು 3.30 ಗಂಟೆ ಸಮಯಕ್ಕೆ ಬಸವನಹಳ್ಳಿ ಪೊಲೀಸರು ಚಿಕ್ಕಮಗಳೂರು ಸರ್ಕಾರಿ ಆಸ್ಪತ್ರೆಗೆ ಬಂದು ತನ್ನನ್ನು ಮತ್ತು ಪ್ರಾಸಾ.1 ರವರನ್ನು ವಿಚಾರಿಸಿರುವುದಾಗಿ, ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1. ಸುಳ್ಳು
ಆ 2. ಸುಳ್ಳು
ಆ 3. ಸುಳ್ಳು
ಆ 4. ಸುಳ್ಳು
ಆ 5. ಸುಳ್ಳು

ಪ್ರಶ್ನೆ-15 ಪ್ರಾಸಾ.2 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ದಿನಾಂಕ 10.07.2019 ರಂದು ಕೃತ್ಯ ನಡೆದ ಸ್ಥಳದಲ್ಲಿ ಮಹಜರ್ ಜರುಗಿಸಲು ಬರುವಂತೆ ಬಸವನಹಳ್ಳಿ ಪೊಲೀಸರು ಕರೆದಿದ್ದ ಮೇರೆಗೆ ತಾನು ಬೆಳಿಗ್ಗೆ 11.00 ಗಂಟೆಗೆ ಹಳೇ ಶೋ ಆಫ್ ಅಂಗಡಿಯ ಮುಂಭಾಗದಲ್ಲಿ ಕೃತ್ಯ ನಡೆದ ಸ್ಥಳಕ್ಕೆ ಹೋದಾಗ ಅಲ್ಲಿ ತಾನು ಪೊಲೀಸರಿಗೆ ಆರೋಪಿತರಾದ ತನ್ನ ಮತ್ತು ಪ್ರಾಸಾ.1 ರವರ ಮೇಲೆ ಹಲ್ಲೆ ಮಾಡಿದ ಸ್ಥಳವನ್ನು ತೋರಿಸಿದ್ದ ಮೇರೆಗೆ ಬೆಳಿಗ್ಗೆ 11.30 ಗಂಟೆಯಿಂದ ಮಧ್ಯಾಹ್ನ 12.30 ಗಂಟೆಯವರೆಗೆ ನಿಪಿ.4 ರಂತೆ ಮಹಜರ್ ಮಾಡಿಕೊಂಡು ನಿಪಿ.5 ಫೋಟೋ ತೆಗೆದುಕೊಂಡಿರುವುದಾಗಿ, ಸದರಿ ಫೋಟೋದಲ್ಲಿ ತನ್ನೊಂದಿಗೆ ಧೀಮಂತ್ ಮತ್ತು ಪವನ್ ಮತ್ತು ಪೊಲೀಸರು ಇರುವುದಾಗಿ, ನಿಪಿ.5 ರಲ್ಲಿ ಕಂಡು ಬರುವ Sony ಎಂದು ಬರೆದಿರುವ ಅಂಗಡಿಯೇ ಹಿಂದೆ ಶೋ ಆಫ್ ಅಂಗಡಿಯಾಗಿರುವುದಾಗಿ, ನಂತರ 1 ನೇ ಆರೋಪಿಯಾದ ನೀನು ಪ್ರಾಸಾ.1 ವಿಶ್ವಾಸ್ ರವರಿಗೆ ಹೊಡೆದ ಮು.ಮಾ.2 ಕಬ್ಬಿಣದ ರಾಡನ್ನು ಪೊಲೀಸರಿಗೆ ತೆಗೆದುಕೊಟ್ಟಿದ್ದನ್ನು,

ಪೋಲಿಸರು ಲ್ಯಾಬಿಗೆ ಕಳುಹಿಸಬೇಕು ಎಂದು ತೆಗೆದುಕೊಂಡಿರುವುದಾಗಿ, ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1. ಸುಳ್ಳು
ಆ 2. ಸುಳ್ಳು
ಆ 3. ಸುಳ್ಳು
ಆ 4. ಸುಳ್ಳು
ಆ 5. ಸುಳ್ಳು

ಪ್ರಶ್ನೆ-16 ಪ್ರಾಸಾ.2 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ತನ್ನನ್ನು, ಪವನ್, ಧೀಮಂತ್ ಮತ್ತು ಚೇತನ್ ರವರನ್ನು ಪೊಲೀಸರು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಅಲ್ಲಿ 2 ನೇ ಮಹಡಿಯಲ್ಲಿರುವ ಎಂ ಎಸ್ ವಾರ್ಡ್ ನಂಬರ್ 175 ರಲ್ಲಿ ಪ್ರಾಸಾ.1 ರವರು ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದು, ಜಗಳವಾದ ದಿನ ಯಾವ ಬಟ್ಟೆಯನ್ನು ಧರಿಸಿದ್ದಿರಿ ಎಂದು ಪ್ರಾಸಾ.1 ರವರನ್ನು ಕೇಳಿದಾಗ ತಾನು ಸದರಿ ಆಸ್ಪತ್ರೆಯಲ್ಲಿ ತೆಗೆದಿಟ್ಟಿದ್ದ ಮು.ಮಾ.1 ಪಾಚಿ ಬಣ್ಣದ ಕಪ್ಪು ಬಣ್ಣದ ಚುಕ್ಕೆಗಳಿದ್ದ ಅರ್ಧ ತೋಳಿನ ಟೀ ಶರ್ಟನ್ನು ಪೊಲೀಸರಿಗೆ ಹಾಜರುಪಡಿಸಿದ್ದು, ಗಲಾಟೆಯಾದಾಗ ಪ್ರಾಸಾ.1 ರವರು ಧರಿಸಿದ್ದ ಶರ್ಟು ಅದೇ ಎಂದು ತಿಳಿಸಿರುವುದಾಗಿ ಸಾಕ್ಷ್ಯ

ಉತ್ತರಃ ಆ 1. ಸುಳ್ಳು
ಆ 2. ಸುಳ್ಳು
ಆ 3. ಸುಳ್ಳು
ಆ 4. ಸುಳ್ಳು
ಆ 5. ಸುಳ್ಳು

ಪ್ರಶ್ನೆ- 17 ಪ್ರಾಸಾ.2 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ದಿನಾಂಕ 11.07.2019 ರಂದು ಪೊಲೀಸರು ತನ್ನನ್ನು, ಧೀಮಂತ್, ಚೇತನ್ ಮತ್ತು ಅಭಿಷೇಕ್ ರವರನ್ನು ಬಸವನಹಳ್ಳಿ ಠಾಣೆಗೆ ಗಲಾಟೆಯ ಬಗ್ಗೆ ವಿಚಾರಣೆ ಮಾಡಲು ಕರೆಸಿದಾಗ ತಾನು ಅವರಿಗೆ ಮೇಲೆ ಹೇಳಿದಂತೆ ನಡೆದ ಎಲ್ಲಾ ವಿಚಾರಗಳನ್ನು ತಿಳಿಸಿರುವುದಾಗಿ, ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1. ಸುಳ್ಳು
ಆ 2. ಸುಳ್ಳು
ಆ 3. ಸುಳ್ಳು
ಆ 4. ಸುಳ್ಳು
ಆ 5. ಸುಳ್ಳು

ಪ್ರಶ್ನೆ-18 ಪ್ರಾಸಾ.3 ಚೇತನ ಇವರು ತಮ್ಮ ಸಾಕ್ಷ್ಯದಲ್ಲಿ ಆರೋಪಿತರಾದ ನೀವುಗಳು ಗೊತ್ತಿದ್ದಾಗಿ, ನೀವೆಲ್ಲರೂ ಚಿಕ್ಕಮಗಳೂರಿನ ವಿಜಯಪುರದವರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1. ಸುಳ್ಳು
ಆ 2. ಸುಳ್ಳು

ಆ 3. ಸುಳ್ಳು
ಆ 4. ಸುಳ್ಳು
ಆ 5. ಸುಳ್ಳು

ಪ್ರಶ್ನೆ-19 ಪ್ರಾಸಾ.3 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಪ್ರಾಸಾ.1, ಪ್ರಾಸಾ.2, ಚಾಸಾ.2 ರಿಂದ ಚಾಸಾ.4, ಚಾಸಾ.7 ರವರು ತನ್ನ ಸ್ನೇಹಿತರು ಎಂದು, ದಿನಾಂಕ 09.07.2019 ರಂದು ಮಧ್ಯಾಹ್ನ 3.00 ಗಂಟೆ ಸಮಯದಲ್ಲಿ ತಾನು ಮತ್ತು ಚಾಸಾ.7 ಅಭಿಷೇಕ್ ವಿಜಯಪುರ ಮುಖ್ಯ ರಸ್ತೆಯಲ್ಲಿರುವ ಹಳೆ ಶೋ ಆಫ್ ಅಂಗಡಿಯ ಮುಂದೆ ನಡೆದುಕೊಂಡು ಹೋಗುತ್ತಿದ್ದಾಗ, ಅಲ್ಲಿ ಆರೋಪಿತರಾದ ನೀವುಗಳು ಮತ್ತು ಇನ್ನು ಇಬ್ಬರು ಗುಂಪು ಕಟ್ಟಿಕೊಂಡು ಪ್ರಾಸಾ.1 ವಿಶ್ವಾಸ್ ರವರಿಗೆ ಹೊಡೆದಿದ್ದು, ಆಗ ಪ್ರಾಸಾ.1 ರವರ ಜೊತೆ ಪ್ರಾಸಾ.2 ರವರು ಇದ್ದುದ್ದಾಗಿ, ತಾನು ಮತ್ತು ಚಾಸಾ.7 ಅಭಿಷೇಕ್ ಜಗಳವನ್ನು ಬಿಡಿಸಲು ಹೋದಾಗ 1 ನೇ ಆರೋಪಿಯಾದ ನೀನು ನಿನ್ನ ಕೈಯಲ್ಲಿ ಸುಮಾರು 1 ವರೆ ಅಡಿ ಉದ್ದದ ಮು.ಮಾ.2 ಕಬ್ಬಿಣದ ರಾಡಿನಿಂದ ಪ್ರಾಸಾ.1 ರವರ ತಲೆಯ ಎಡಭಾಗಕ್ಕೆ ಹೊಡೆದಿದ್ದಾಗಿ, ಪುನಃ ಹೊಡೆಯಲು ಹೋದಾಗ ಅದರಿಂದ ತಪ್ಪಿಸಿಕೊಳ್ಳಲು ಪ್ರಾಸಾ.1 ರವರು ತನ್ನ ಎಡಗೈಯನ್ನು ಅಡ್ಡ ಹಿಡಿದಾಗ ಆತನ ಎಡಗೈಗೆ ಪೆಟ್ಟಾಗಿರುವುದಾಗಿ, ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1. ಸುಳ್ಳು
ಆ 2. ಸುಳ್ಳು
ಆ 3. ಸುಳ್ಳು
ಆ 4. ಸುಳ್ಳು
ಆ 5. ಸುಳ್ಳು

ಪ್ರಶ್ನೆ-20 ಪ್ರಾಸಾ.3 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ನಂತರ ತಾನು, ಚಾಸಾ.7, ಪ್ರಾಸಾ.2 ರವರು ಸೇರಿ ಪ್ರಾಸಾ.1 ರವರನ್ನು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆಗಾಗಿ ದಾಖಲಿಸಿರುವುದಾಗಿ, ಪ್ರಾಸಾ.1 ರವರ ತಲೆಯ ಎಡಭಾಗದಲ್ಲಿ ಪೆಟ್ಟಾಗಿ ರಕ್ತ ಬರುತ್ತಿದ್ದು, ಸುಮಾರು ಅರ್ಧ ಗಂಟೆಯ ಬಳಿಕ ತಾನು ಪ್ರಾಸಾ.2 ಸುದೀಪ್ ರವರನ್ನು ವಿಚಾರ ಮಾಡಿದ್ದು ಆ ದಿನ ಆತ ಹಳೆಯ ಶೋ ಆಫ್ ಅಂಗಡಿಯ ಮುಂಭಾಗ ನಡೆದುಕೊಂಡು ಹೋಗುತ್ತಿದ್ದಾಗ ಆರೋಪಿತರಾದ ನೀವುಗಳು ಆತನಿಗೆ ಹೊಡೆದಿರುವುದಾಗಿ, ನಂತರ ಆತ ಪ್ರಾಸಾ.1 ರವರ ಮನೆಗೆ ಹೋಗಿ ಆ ವಿಚಾರವನ್ನು ತಿಳಿಸಿ ಪ್ರಾಸಾ.1 ರವರನ್ನು ಕರೆದುಕೊಂಡು ಹಳೆಯ ಶೋ ಆಫ್ ಅಂಗಡಿಯ ಮುಂಭಾಗಕ್ಕೆ ಹೋಗಿದ್ದು ಅಲ್ಲಿ ಪ್ರಾಸಾ.1 ರವರು ಆರೋಪಿತರಾದ ನಿಮ್ಮಗಳನ್ನು ಪ್ರಾಸಾ.2 ರವರಿಗೆ ಏಕೆ ಹೊಡೆದದ್ದು ಎಂದು ಪ್ರಶ್ನಿಸಿದ್ದು, ಆರೋಪಿತರಾದ ನೀವುಗಳು ಸೂಳೇ ಮಗನೇ ಎಂದು ಕೆಟ್ಟದಾಗಿ ಬೈದಿದ್ದು ನಂತರ 1 ನೇ ಆರೋಪಿಯಾದ ನೀನು ರಾಡಿನಿಂದ ಪ್ರಾಸಾ.1 ರವರ ಮೇಲೆ ಹಲ್ಲೆ ಮಾಡಿರುವುದಾಗಿ, ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1. ಸುಳ್ಳು
ಆ 2. ಸುಳ್ಳು
ಆ 3. ಸುಳ್ಳು
ಆ 4. ಸುಳ್ಳು
ಆ 5. ಸುಳ್ಳು

ಪ್ರಶ್ನೆ-21 ಪ್ರಾಸಾ.3 ಇವರು ತಮ್ಮ ಸಾಕ್ಷ್ಯದಲ್ಲಿ ನಿಪಿ.5 ಫೋಟೋದಲ್ಲಿ ಗಲಾಟೆ ನಡೆದ ಸ್ಥಳ ಕಂಡು ಬಂದಿದ್ದಾಗಿ, ದಿನಾಂಕ 11.07.2019 ರಂದು ತನ್ನನ್ನು, ಪ್ರಾಸಾ.2 ಮತ್ತು ಚಾಸಾ.7 ರವರನ್ನು ಬಸವನಹಳ್ಳಿ ಪೊಲೀಸರು ತಮ್ಮ ಠಾಣೆಗೆ ಕರೆದು ವಿಚಾರಿಸಿದಗ ತಾನು ಅವರಿಗೆ ನಡೆದ ಎಲ್ಲಾ ವಿಚಾರಗಳನ್ನು ತಿಳಿಸಿ ಹೇಳಿಕೆ ನೀಡಿರುವುದಾಗಿ, ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1. ಸುಳ್ಳು
ಆ 2. ಸುಳ್ಳು
ಆ 3. ಸುಳ್ಳು
ಆ 4. ಸುಳ್ಳು
ಆ 5. ಸುಳ್ಳು

ಪ್ರಶ್ನೆ-22 ಪ್ರಾಸಾ.4 ಪವನ ಇವರು ತಮ್ಮ ಸಾಕ್ಷ್ಯದಲ್ಲಿ ಆರೋಪಿತರಾದ ನಿಮ್ಮ ಪರಿಚಯ ಇರುವುದಾಗಿ, ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1. ಸುಳ್ಳು
ಆ 2. ಸುಳ್ಳು
ಆ 3. ಸುಳ್ಳು
ಆ 4. ಸುಳ್ಳು
ಆ 5. ಸುಳ್ಳು

ಪ್ರಶ್ನೆ-23 ಪ್ರಾಸಾ.4 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಚಾಸಾ.1, 2, 4 ರಿಂದ 7 ತನ್ನ ಸ್ನೇಹಿತರು ಎಂದು ನಿಪಿ.6 ನೋಟೀಸು ಮತ್ತು ನಿಪಿ.4 ಮಹಜರಿನಲ್ಲಿ ನಲ್ಲಿ ತನ್ನ ಸಹಿ ಇರುವುದಾಗಿ, ನಿಪಿ.5 ಭಾವಚಿತ್ರದಲ್ಲಿ ತಾನು ಕೂಡ ಇರುವುದಾಗಿ, ನಿಪಿ.4 ಮತ್ತು 6 ಕ್ಕೆ ಜುಲೈ 2019 ರಲ್ಲಿ ವಿಜಯಪುರ ಮುಖ್ಯ ರಸ್ತೆಯ ಮ್ಯೂಸಿಕ್ ವರ್ಲ್ಡ್ ಶಾಪಿನ ಹತ್ತಿರ ಸಹಿ ಮಾಡಿದ್ದು, ಬಸವನಹಳ್ಳಿ ಪೋಲೀಸರು ಅಲ್ಲಿ ಸ್ಥಳ ಮಹಜರು ಕ್ರಮ ಜರುಗಿಸಿದಾಗ ತಾನು, ಚಾಸಾ.2 ಹಾಗೂ ಚಾಸಾ.5 ಹಾಜರಿದ್ದು, ಚಾಸಾ.5 ರವರು ಪೋಲೀಸರಿಗೆ ಸ್ಥಳ ತೋರಿಸಿದ್ದು, ಸದರಿ ಸ್ಥಳದಲ್ಲಿ ಗಲಾಟೆಯಾಗಿದೆ ಎಂದು ಚಾಸಾ.5 ಮಾಹಿತಿ ನೀಡಿರುವುದಾಗಿ, ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1. ಸುಳ್ಳು
ಆ 2. ಸುಳ್ಳು
ಆ 3. ಸುಳ್ಳು
ಆ 4. ಸುಳ್ಳು
ಆ 5. ಸುಳ್ಳು

ಪ್ರಶ್ನೆ- 24 ಪ್ರಾಸಾ.4 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಚಾಸಾ.2 ರವರು ಸ್ಥಳದಲ್ಲಿ ಬಿದ್ದಿದ್ದ ಮು.ಮಾ. 2 ರಾಡನ್ನು ಹಾಜರುಪಡಿಸಿದ್ದು ಸದರಿ ರಾಡಿನಿಂದ ಹಲ್ಲೆ ನಡೆದಿರುವುದಾಗಿ ತಿಳಿಸಿದ್ದು, ನಂತರ ಪೋಲೀಸರು ತನ್ನನ್ನು, ಚಾಸಾ.2, 4 ಮತ್ತು 5 ರವರನ್ನು ಚಿಕ್ಕಮಗಳೂರು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದಾಗ ಚಾಸಾ.1 ರವರು ಸರ್ಕಾರಿ ಆಸ್ಪತ್ರೆಯಲ್ಲಿ ದಾಖಲಾಗಿದ್ದು ಆಸ್ಪತ್ರೆಯ ಒಂದು ಮೂಲೆಯಲ್ಲಿದ್ದ ಮು.ಮಾ.1 ಶರ್ಟ್ ನ್ನು ಚಾಸಾ.2 ಹಾಜರುಪಡಿಸಿದ್ದು ಅದನ್ನು ಪೋಲೀಸರು ಅಮಾನತುಪಡಿಸಿಕೊಂಡಿರುವುದಾಗಿ, ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1. ಸುಳ್ಳು
ಆ 2. ಸುಳ್ಳು
ಆ 3. ಸುಳ್ಳು
ಆ 4. ಸುಳ್ಳು
ಆ 5. ಸುಳ್ಳು

ಪ್ರಶ್ನೆ-25 ಪ್ರಾಸಾ.5 ಡಾಃ ಜಯಲಕ್ಷ್ಮೀ, ಹಿರಿಯ ತಜ್ಞರು, ಜಿಲ್ಲಾ ಆಸ್ಪತ್ರೆ, ಇವರು ತಮ್ಮ ಸಾಕ್ಷ್ಯದಲ್ಲಿ ದಿಃ 09.07.2019 ರಂದು ವಿಶ್ವಾಸ್ ಬಿನ್ ರಮೇಶ್ ಎಂಬ 21 ವರ್ಷದ ವ್ಯಕ್ತಿ ಆತನ ಸ್ನೇಹಿತ ಸಚಿನ್ ಎನ್ನುವವರೊಂದಿಗೆ 1 ನೇ ಆರೋಪಿಯಾದ ನೀನು ಹಾಗೂ ಇತರೆ ಆರೋಪಿತರಾದ ನೀವುಗಳು ರಾಡಿನಿಂದ ಹಲ್ಲೆ ನಡೆಸಿದ ಹಿನ್ನೆಲೆಯಲ್ಲಿ ಚಿಕಿತ್ಸೆಗಾಗಿ ಮಧ್ಯಾಹ್ನ 3.00 ಗಂಟೆ ಸಮಯದಲ್ಲಿ ಹಾಜರಾಗಿದ್ದು, ತಾನು ಸದರಿ ವ್ಯಕ್ತಿಯನ್ನು ಪರೀಕ್ಷಿಸಿದಾಗ ಈ ಕೆಳಕಂಡ ಗಾಯಗಳಾಗಿರುವುದು ಕಂಡುಬಂದಿದ್ದು, 1. Cut lacerated wound of about 4 cms x half cms back of left ear labule. 2. Swelling and tenderness over left wrist region ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1. ಸುಳ್ಳು
ಆ 2. ಸುಳ್ಳು
ಆ 3. ಸುಳ್ಳು
ಆ 4. ಸುಳ್ಳು
ಆ 5. ಸುಳ್ಳು

ಪ್ರಶ್ನೆ-26 ಪ್ರಾಸಾ.5 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಗಾಯಾಳುವನ್ನು ಎಕ್ಸರೇಗೆ ಒಳಪಡಿಸಿದ್ದು ಎಕ್ಸರೇ ವರದಿಯಲ್ಲಿ ಈ ಕೆಳಗಿನ ಗಾಯಗಳಾಗಿರುವುದಾಗಿ, Fracture L Stylord Process of ulnar bone ಎಂದು ಹಾಗೂ ಮೇಲೆ ಹೇಳಿದ ಗಾಯ ತೀವ್ರ ಸ್ವರೂಪದ್ದಾಗಿದ್ದು ತಾನು ಪರೀಕ್ಷಿಸುವ 2 ರಿಂದ 4 ಗಂಟೆಗಳ ಮೊದಲು ಸಂಭವಿಸಿದ್ದು, ತಾನು ಗಾಯಾಳುವನ್ನು ಪರೀಕ್ಷಿಸಿ ನಿಪಿ.7 ರಂತೆ

ಗಾಯದ ಪ್ರಮಾಣಪತ್ರವನ್ನು ನೀಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1. ಸುಳ್ಳು
ಆ 2. ಸುಳ್ಳು
ಆ 3. ಸುಳ್ಳು
ಆ 4. ಸುಳ್ಳು
ಆ 5. ಸುಳ್ಳು

ಪ್ರಶ್ನೆ- 27 ಪ್ರಾಸಾ.5 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ದಿಃ 07.08.2019 ರಂದು ಬಸವನಹಳ್ಳಿ ಪೋಲೀಸರು ನಿಪಿ.8 ರಂತೆ ಮನವಿಯನ್ನು ಸಲ್ಲಿಸಿ ಒಂದು ಐರನ್ ರಾಡನ್ನು ಹಾಜರುಪಡಿಸಿ ಅಭಿಪ್ರಾಯ ಕೇಳಿದ್ದು, ತಾನು ಸದರಿ ರಾಡನ್ನು ಪರೀಕ್ಷಿಸಿ ತನ್ನ ಅಭಿಪ್ರಾಯವನ್ನು ನಿಪಿ.9 ರಿಂತೆ ನೀಡಿದ್ದು, ತನ್ನ ಮುಂದೆ ಹಾಜರುಪಡಿಸಿದ ರಾಡಿನಲ್ಲಿ ಹಲ್ಲೆ ನಡೆಸಿದರೆ ನಿಪಿ.7 ರಲ್ಲಿ ಹೇಳಿದ ಗಾಯ ಆಗುವ ಸಾದ್ಯತೆ ಇದೆ ಎಂದು ಅಭಿಪ್ರಾಯ ನೀಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1. ಸುಳ್ಳು
ಆ 2. ಸುಳ್ಳು
ಆ 3. ಸುಳ್ಳು
ಆ 4. ಸುಳ್ಳು
ಆ 5. ಸುಳ್ಳು

ಪ್ರಶ್ನೆ-28 ಪ್ರಾಸಾ.6 ಪುಟ್ಟಸ್ವಾಮಿ, ನಿವೃತ್ತ ಎ. ಎಸ್. ಐ, ಚಿಕ್ಕಮಗಳೂರು ಇವರು ತಮ್ಮ ಸಾಕ್ಷ್ಯದಲ್ಲಿ ದಿಃ 09.07.2019 ರಂದು ತಾನು ಠಾಣಾ ಪ್ರಭಾರದಲ್ಲಿದ್ದಾಗ ಚಿಕ್ಕಮಗಳೂರು ಸರ್ಕಾರಿ ಆಸ್ಪತ್ರೆಯಿಂದ ಕರೆ ಮಾಡಿದ್ದು, ಚಾಸಾ.1 ರವರು ಆಸ್ಪತ್ರೆಯಲ್ಲಿ ದಾಖಲಾಗಿದ್ದರಿಂದ ಸದರಿಯವರ ಹೇಳಿಕೆ ಪಡೆದುಕೊಳ್ಳುವಂತೆ ಮಾಹಿತಿ ನೀಡಿದ್ದ ಮೇರೆಗೆ ಸಂಜೆ 4.00 ಗಂಟೆ ಸಮಯಕ್ಕೆ ಚಿಕ್ಕಮಗಳೂರು ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ಚಾಸಾ.1 ರವರ ನಿಪಿ.3 ಹೇಳಿಕೆ ಪಡೆದು ಠಾಣೆಗೆ ಹಿಂತಿರುಗಿ ಪ್ರಕರಣ ದಾಖಲಿಸಿ ನ್ಯಾಯಾಲಯಕ್ಕೆ ನಿಪಿ.10 ರಂತೆ ಪ್ರಥಮ ವರ್ತಮಾನ ವರದಿಯನ್ನು ಸಲ್ಲಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1. ಸುಳ್ಳು
ಆ 2. ಸುಳ್ಳು
ಆ 3. ಸುಳ್ಳು
ಆ 4. ಸುಳ್ಳು
ಆ 5. ಸುಳ್ಳು

ಪ್ರಶ್ನೆ-29 ಪ್ರಾಸಾ.7 ದೇವರಾಜು, ಮುಖ್ಯ ಪೇದೆ, ಮಲ್ಲಂದೂರು ಪೊಲೀಸ್ ಠಾಣೆ ಚಿಕ್ಕಮಗಳೂರು ಇವರು ತಮ್ಮ ಸಾಕ್ಷ್ಯದಲ್ಲಿ ದಿಃ 10.07.2019 ರಂದು ತನಿಖಾಧಿಕಾರಿಗಳಾದ ಚಾಸಾ.13 ರವರೊಂದಿಗೆ ಕೃತ್ಯ ನಡೆದ ಸ್ಥಳಕ್ಕೆ

ಭೇಟಿ ನೀಡಿ ಚಾಸಾ.13 ರವರು ಸ್ಥಳದಲ್ಲಿ ಜರುಗಿಸಿದಾಗ ಅವರು ಹೇಳಿದಂತೆ ನಿಪಿ.4 ಮಹಜರನ್ನು ತಾನು ಬರೆದಿದ್ದು ಆ ಸಮಯದಲ್ಲಿ ನಿಪಿ.5 ರ ಭಾವಚಿತ್ರವನ್ನು ಸಂಗ್ರಹಿಸಿರುವುದಾಗಿ, ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1. ಸುಳ್ಳು
ಆ 2. ಸುಳ್ಳು
ಆ 3. ಸುಳ್ಳು
ಆ 4. ಸುಳ್ಳು
ಆ 5. ಸುಳ್ಳು

ಪ್ರಶ್ನೆ-30 ಪ್ರಾಸಾ.7 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಅದೇ ದಿನ ಚಿಕ್ಕಮಗಳೂರು ಸರ್ಕಾರಿ ಆಸ್ಪತ್ರೆಗೆ ಚಾಸಾ.13 ರವರೊಡನೆ ಭೇಟಿ ನೀಡಿ ಎರಡನೇ ಮಹಡಿಯ ರೂಮ ನಂ.172 ರಲ್ಲಿ ಗಾಯಾಳು ಚಿಕಿತ್ಸೆ ಪಡೆಯುತ್ತಿದ್ದು ಗಾಯಾಳು ಧರಿಸಿದ್ದ ಬಟ್ಟೆಯನ್ನು ಅಮಾನತುಪಡಿಸಿಕೊಳ್ಳುವ ಕಾಲಕ್ಕೆ ನಿಪಿ.1 ರಂತೆ ಮಹಜರನ್ನು ಚಾಸಾ.13 ರವರು ಹೇಳಿದಂತೆ ಬರೆದಿದ್ದು. ಆ ಸಮಯದಲ್ಲಿ ಕಚ್ಚಾ ನಕಾಶೆಯನ್ನು ತಯಾರಿಸಿ ನಿಪಿ.2 ರ ಭಾವಚಿತ್ರವನ್ನು ಸಂಗ್ರಹಿಸಿರುವುದಾಗಿ, ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1. ಸುಳ್ಳು
ಆ 2. ಸುಳ್ಳು
ಆ 3. ಸುಳ್ಳು
ಆ 4. ಸುಳ್ಳು
ಆ 5. ಸುಳ್ಳು

ಪ್ರಶ್ನೆ-31 ಪ್ರಾಸಾ.7 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಅದೇ ದಿನ ಠಾಣೆಗೆ ಭೇಟಿ ನೀಡಿ ತನ್ನ ಮೊಬೈಲಿನಲ್ಲಿ ಸಂಗ್ರಹಿಸಲಾದ ಭಾವಚಿತ್ರಗಳನ್ನು ಠಾಣಾ ಕಂಪ್ಯೂಟರ್ ಮೂಲಕ ನಿಪಿ.11 ರಂತೆ ಸಿಡಿಗೆ ಅಳವಡಿಸಿ ನಿಪಿ.12 ರಂತೆ ದೃಢೀಕರಣ ಪತ್ರವನ್ನು ನೀಡಿದ್ದಾಗಿ, ತನಗೆ ಮೊಬೈಲಿನಲ್ಲಿ ಸಂಗ್ರಹಿಸಿದ ಭಾವಚಿತ್ರಗಳನ್ನು ಕಂಪ್ಯೂಟರ್ ಸಹಾಯದಿಂದ ಸಿಡಿಗೆ ವರ್ಗಾಯಿಸಲು ತನಗೆ ಇಲಾಖೆ ತರಬೇತಿ ನೀಡಿದ್ದು ಮತ್ತು ತಾನು ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ ಪಾಸು ಮಾಡಿರುವುದಾಗಿ, ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1. ಸುಳ್ಳು
ಆ 2. ಸುಳ್ಳು
ಆ 3. ಸುಳ್ಳು
ಆ 4. ಸುಳ್ಳು
ಆ 5. ಸುಳ್ಳು

ಪ್ರಶ್ನೆ- 32 ಪ್ರಾಸಾ.8 ನಂದಿನಿ ಶೆಟ್ಟಿ ಪಿ ಎಸ್ ಐ, ಮಹಿಳಾ ಠಾಣೆ, ಚಿಕ್ಕಮಗಳೂರು ಇವರು ತಮ್ಮ ಸಾಕ್ಷ್ಯದಲ್ಲಿ ದಿಃ 23.10.2019 ರಂದು ಈ ಪ್ರಕರಣದ ಮುಂದಿನ ತನಿಖೆಯನ್ನು ಚಾಸಾ.13 ರವರಿಂದ ಪಡೆದುಕೊಂಡು ಅಲ್ಲಿಯವರೆಗೆ ಆದ ತನಿಖೆಯನ್ನು ಪರಿಶೀಲಿಸಿ ಆರೋಪಿತರಾದ ನಿಮ್ಮಗಳ ವಿರುದ್ದ ಸಾಕ್ಷ್ಯಧಾರಗಳಿದ್ದರಿಂದ ನಿಮ್ಮ

ವಿರುದ್ಧ ದೋಷಾರೋಪಣೆ ಪಟ್ಟಿ ಸಲ್ಲಿಸಿರುವುದಾಗಿ, ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1. ಸುಳ್ಳು
ಆ 2. ಸುಳ್ಳು
ಆ 3. ಸುಳ್ಳು
ಆ 4. ಸುಳ್ಳು
ಆ 5. ಸುಳ್ಳು

ಪ್ರಶ್ನೆ-33 ಪ್ರಾಸಾ.9 ಗಿರೀಶ್ ಕುಮಾರ್ ಎಸ್, ಪಿ. ಎಸ್. ಐ ಬಾಣಸವಾಡಿ ಸಂಚಾರಿ ಪೊಲೀಸ್ ಠಾಣೆ, ಬೆಂಗಳೂರು ಇವರು ತಮ್ಮ ಸಾಕ್ಷ್ಯದಲ್ಲಿ ದಿಃ 10.07.2019 ರಂದು ಚಾಸಾ.11 ರವರಿಂದ ಈ ಪ್ರಕರಣದ ಮುಂದಿನ ತನಿಖೆಯನ್ನು ವಹಿಸಿಕೊಂಡು ಕಡತ ಪರಿಶೀಲಿಸಿ ಅದೇ ದಿನ ಆರೋಪಿರಾದ ನಿಮ್ಮಗಳ ಪತ್ತೆಗಾಗಿ ಸಿಬ್ಬಂದಿಗಳನ್ನು ನೇಮಿಸಿದ್ದ ಮೇರೆಗೆ ತಮ್ಮ ಸಿಬ್ಬಂದಿಗಳು ಆರೋಪಿತರಾದ ನಿಮ್ಮನ್ನು ತನ್ನ ಮುಂದೆ ಹಾಜರುಪಡಿಸಿದ್ದು ತಾನು ಆರೋಪಿತರಾದ ನಿಮ್ಮಗಳನ್ನು ವಿಚಾರಣೆಗೆ ಒಳಪಡಿಸಿ, ನಿಮ್ಮಗಳ ಮೇಲೆ ದಸ್ತಗಿರಿ ಕ್ರಮ ಅನುಸರಿಸಿ, ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಾಗಿ, ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1. ಸುಳ್ಳು
ಆ 2. ಸುಳ್ಳು
ಆ 3. ಸುಳ್ಳು
ಆ 4. ಸುಳ್ಳು
ಆ 5. ಸುಳ್ಳು

ಪ್ರಶ್ನೆ- 34 ಪ್ರಾಸಾ.9 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಅದೇ ದಿನ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಪಂಚ ಸಾಕ್ಷಿದಾರರಾದ ಚಾಸಾ.5 ರವರು ತೋರಿಸಿದ ಸ್ಥಳದಲ್ಲಿ ಚಾಸಾ.2 ಮತ್ತು 3 ರವರ ಸಮಕ್ಷಮ ಘಟನಾ ಸ್ಥಳದ ಮಹಜರು ಕ್ರಮ ಜರುಗಿಸಿದ್ದಾಗಿ, ಚಾಸಾ.2 ಮತ್ತು 3 ರವರಿಗೆ ನಿಪಿ.6 ರಂತೆ ನೋಟೀಸನ್ನು ನೀಡಿದ್ದಾಗಿ, ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1. ಸುಳ್ಳು
ಆ 2. ಸುಳ್ಳು
ಆ 3. ಸುಳ್ಳು
ಆ 4. ಸುಳ್ಳು
ಆ 5. ಸುಳ್ಳು

ಪ್ರಶ್ನೆ- 35 ಪ್ರಾಸಾ.9 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ನಿಪಿ.4 ರಡಿಯಲ್ಲಿ ಕೃತ್ಯಕ್ಕೆ ಬಳಸಿದ ಮು.ಮಾ.2 ಕಬ್ಬಿಣದ ರಾಡನ್ನು ಅಮಾನತುಪಡಿಸಿಕೊಂಡಿದ್ದು, ಪಂಚನಾಮೆ ಕಾಲದಲ್ಲಿ ಸಂಗ್ರಹಿಸಿದ ನಕ್ಷೆಯನ್ನು ನಿಪಿ.14 ಎಂದು ಗುರುತಿಸಿದ್ದಾಗಿ, ನಿಪಿ.15 ರಂತೆ ಕೃತ್ಯ ನಡೆದ ಸ್ಥಳದ ಜಿಪಿಎಸ್ ಲೋಕೇಶನ್ ಟ್ಯಾಗನ್ನು ಗರುತಿಸಿ ನ್ಯಾಯಾಲಯಕ್ಕೆ ಮಾಲುಪಟ್ಟಿ ಸಲ್ಲಿಸಿರುವುದಾಗಿ, ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1. ಸುಳ್ಳು
ಆ 2. ಸುಳ್ಳು
ಆ 3. ಸುಳ್ಳು
ಆ 4. ಸುಳ್ಳು
ಆ 5. ಸುಳ್ಳು

ಪ್ರಶ್ನೆ- 36 ಪ್ರಾಸಾ.9 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಅದೇ ದಿನ ಚಿಕ್ಕಮಗಳೂರು ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ಅಲ್ಲಿ ಒಳರೋಗಿಯಾಗಿ ದಾಖಲಾಗಿದ್ದ ಚಾಸಾ.1 ರವರನ್ನು ವಿಚಾರಿಸಿ ಚಾಸಾ.1 ರವರು ಕೃತ್ಯ ಸಮಯದಲ್ಲಿ ಧರಿಸಿದ್ದ ಮು.ಮಾ.1 ಪಾಚಿ ಬಣ್ಣದ ಟೀಶರಟನ್ನು ನಿಪಿ.16 ರಂತೆ ಚಾಸಾ-3 ಮತ್ತು 4 ರವರಿಗೆ ನೋಟೀಸು ನೀಡಿ ಸದರಿಯವರ ಸಮಕ್ಷಮ ಅಮಾನತುಪಡಿಸಿಕೊಂಡು ನಿಪಿ.1 ರಂತೆ ಮಹಜರನ್ನು ಜರುಗಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1. ಸುಳ್ಳು
ಆ 2. ಸುಳ್ಳು
ಆ 3. ಸುಳ್ಳು
ಆ 4. ಸುಳ್ಳು
ಆ 5. ಸುಳ್ಳು

ಪ್ರಶ್ನೆ-37 ಪ್ರಾಸಾ.9 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ನಿಪಿ.1 ರ ಸಮಯದಲ್ಲಿ ನಿಪಿ.17 ರಂತೆ ನಕ್ಷೆಯನ್ನು ತಯಾರಿಸಿ, ನಿಪಿ.2 ರಂತೆ ಭಾವಚಿತ್ರವನ್ನು ಸಂಗ್ರಹಿಸಿದ್ದಾಗಿ, ಆ ಸಮಯದಲ್ಲಿ ಸ್ಥಳದ ಜಿಪಿಎಸ್ ಲೋಕೇಶನ್ ಟ್ಯಾಗನ್ನು ಹಾಜರುಪಡಿಸಿದ್ದು ನಿಪಿ.18 ಎಂದು ಗುರುತಿಸಿದ್ದು ನಂತರ ನ್ಯಾಯಾಲಯಕ್ಕೆ ಮಾಲುಪಟ್ಟಿ ಸಲ್ಲಿಸಿರುವುದಾಗಿ, ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1. ಸುಳ್ಳು
ಆ 2. ಸುಳ್ಳು
ಆ 3. ಸುಳ್ಳು
ಆ 4. ಸುಳ್ಳು
ಆ 5. ಸುಳ್ಳು

ಪ್ರಶ್ನೆ-38 ಪ್ರಾಸಾ.9 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಅದೇ ದಿನ ಚಾಸಾ.1 ರವರ ಬಾಬ್ತು ಡೆಂಗ್ಯೂ ಸೆರಾಲಜಿ ವರದಿ ಪಡೆದು ಕಡತಕ್ಕೆ ಅಳವಡಿಸಿ, ದಿಃ 11.02.2019 ರಂದು ಸಾಕ್ಷಿದಾರರಾದ ಚಾಸಾ.5 ರಿಂದ 7 ರವರ ಹೇಳಿಕೆ ಪಡೆದು, ದಿಃ 19.09.2019 ರಂದು ಚಾಸಾ.1 ರವರ ಬಾಬ್ತು ಗಾಯದ ಪ್ರಮಾಣಪತ್ರವನ್ನು ನಿಪಿ.7 ರಂತೆ ಪಡೆದು ಕಡತದಲ್ಲಿ ಅಳವಡಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1. ಸುಳ್ಳು
ಆ 2. ಸುಳ್ಳು
ಆ 3. ಸುಳ್ಳು

ಆ 4. ಸುಳ್ಳು
ಆ 5. ಸುಳ್ಳು

ಪ್ರಶ್ನೆ-39 ಪ್ರಾಸಾ.10 ಸುತೇಶ, ಪಿ. ಎಸ್. ಐ, ಬಂಟ್ವಾಳ ಠಾಣೆ, ಬಂಟ್ವಾಳ ಇವರು ತಮ್ಮ ಸಾಕ್ಷ್ಯದಲ್ಲಿ ಈ ಪ್ರಕರಣದ ಕಡತವನ್ನು ಪಿ.ಎಸ್.ಐ ವಿನೀತ್ ರವರಿಂದ ಪಡೆದು, ದಿಃ 30.06.2020 ರಂದು ಈ ಪ್ರಕರಣದಲ್ಲಿ ಆರೋಪಿತರಾದ ನೀವುಗಳು ಕೃತ್ಯಕ್ಕೆ ಬಳಸಿದ ರಾಡನ್ನು ಮಲ್ಲೇಗೌಡ ಜಿಲ್ಲಾ ಆಸ್ಪತ್ರೆಯ ವೈದ್ಯಾಧಿಕಾರಿ ಮುಂದೆ ಹಾಜರುಪಡಿಸಿ ನಿಪಿ.8 ರಂತೆ ಮನವಿ ಸಲ್ಲಿಸಿ ಅವರ ಅಭಿಪ್ರಾಯವನ್ನು ನಿಪಿ.9 ರಂತೆ ಪಡೆದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಆ 1. ಸುಳ್ಳು
ಆ 2. ಸುಳ್ಳು
ಆ 3. ಸುಳ್ಳು
ಆ 4. ಸುಳ್ಳು
ಆ 5. ಸುಳ್ಳು

ಪ್ರಶ್ನೆ- 40 ಈ ಕೇಸಿನಲ್ಲಿ ನೀವು ಹೆಚ್ಚಿಗೆ ಏನಾದರೂ ಹೇಳುವುದು ಇದೆಯೇ?

ಉತ್ತರಃ ಆ 1. ಇಲ್ಲ
ಆ 2. ಇಲ್ಲ
ಆ 3. ಇಲ್ಲ
ಆ 4. ಇಲ್ಲ
ಆ 5. ಇಲ್ಲ

ಪ್ರಶ್ನೆ-41 ನಿಮ್ಮ ಪರ ಸಾಕ್ಷಿಗಳ ವಿಚಾರಣೆ ಮಾಡುವಿರಾ?

ಉತ್ತರಃ ಆ 1. ಇಲ್ಲ
ಆ 2. ಇಲ್ಲ
ಆ 3. ಇಲ್ಲ
ಆ 4. ಇಲ್ಲ
ಆ 5. ಇಲ್ಲ

(ಮೇಲಿನ ಪ್ರಶ್ನೆಗಳನ್ನು ಆರೋಪಿತರಿಗೆ ಕೇಳಿ ಆತ ಕೊಟ್ಟ ಉತ್ತರವನ್ನು ನಾನೇ ಸ್ವತಃ ಕೇಳಿ ಬರೆದುಕೊಂಡಿರುವುದು ನಿಜವಾಗಿದೆ ಎಂದು ದೃಢೀಕರಿಸುತ್ತೇನೆ).

ಸಹಿ/-
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಚಿಕ್ಕಮಗಳೂರು